ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ¨AU – 4J<br>Part – IVA | ಬೆಂಗಳೂರು, ಸೋಮವಾರ,19,ಅಕ್ಟೋಬರ್, 2020( ಆಶ್ವಯುಜ, 27, ಶಕವರ್ಷ ೧೯೪2)<br>Bengaluru, MONDAY,19,OCTOBER,2020( Aashwayuja,27, ShakaVarsha 1942) | ನಂ. 475<br>No. 475 |


## DEPARTMENT OF PARLIAMENTARY AFFAIRS AND LEGISLATION SECRETARIAT

## NOTIFICATION

### NO: DPAL 69 SHASANA 2020, BENGALURU, DATED:19.10.2020

The Karnataka Land Revenue (Second Amendment) Bill, 2020 ಇದಕ್ಕೆ 2020ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 44 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

# KARNATAKA ACT NO. 44 OF 2020

(First Published in the Karnataka Gazette Extra-ordinary on the 19th Day of October, 2020)

**The Karnataka Land Revenue (Second Amendment) Act, 2020**

(Received the assent of the Governor on the 19th day of October 2020)

An Act further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964), for the purposes hereinafter appearing;

Be it enacted by the Karnataka State Legislature in the Seventy first year of the Republic of India, as follows:-

**1. Short title and commencement.-** (1) This Act may be called the Karnataka Land Revenue (Second Amendment) Act, 2020.

(2) It shall come into force at once.

**2. Amendment of section 2.-** In the section 2 of the Karnataka Land Revenue Act, 1964 (Karnataka Act 12 of 1964) (hereinafter referred to as the principal Act), after clause (14) the following shall be inserted, namely:-

"(14-A) "Land locked Government land" means Kharab Government land within boundary of the land owned by the private person or State Government Departments or Central Government Departments or Autonomous Bodies or Statutory Bodies having no access for the public by road or by foot or by cart track and not useful for public purpose."

**3. Amendment of section 69-A.-** In section 69-A of the principal Act, after the proviso to sub-section (1), the following shall be inserted, namely:-

"Provided further that, Land locked Government Kharab land in city areas and upto 18 kilometer from the limits of the Bruhat Bengaluru Mahanagarapalike, upto 5 kilometer from the limits of other city corporations after extinguishment of public right under section 68, may be disposed off by the Government, in such manner, at such rates as may be prescribed but not less than the market value guidelines prevailing.

Provided also that, Grant of Government Lands leased for more than fifteen years to Societies, Charitable, or Religious institutions, or Educational institutions or Agriculture or other purpose prior to the date of commencement of the Karnataka Land Revenue (Second Amendment) Act, 2020 shall be disposed off, by the Government after ensuring that such land is not required for the Government, as a one time measure in such manner, at such rates, as may be prescribed but not less than the market value guidelines prevailing, if it is for the same purpose, but not less than twice the market value guidelines for other purpose."

By Order and in the name of
the Governor of Karnataka,

**(K. DWARAKANATH BABU)**
Secretary to Government
Department of Parliamentary Affairs
and Legislation

**<u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>**

**<u>ಅಧಿಸೂಚನೆ</u>**

**<u>ಸಂಖ್ಯೆ: ಸಂವ್ಯಶಾಇ 69 ಶಾಸನ 2020, ಬೆಂಗಳೂರು, ದಿನಾಂಕ:19.10.2020.</u>**

The Karnataka Land Revenue (Second Amendment) Bill, 2020 ಇದಕ್ಕೆ 2020ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 44 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020 ರ ಕರ್ನಾಟಕ ಅಧಿನಿಯಮ ಸಂಖ್ಯೆ:**

(2020 ರ ಅಕ್ಟೋಬರ್ ತಿಂಗಳ ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2020**

(2020 ರ ಅಕ್ಟೋಬರ್ ತಿಂಗಳ ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12)(ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (14)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(14-ಎ) "ಭೂ ಬಂಧಿತ ಸರ್ಕಾರಿ ಭೂಮಿ" ಎಂದರೆ ಖಾಸಗಿ ವ್ಯಕ್ತಿ ಅಥವಾ ರಾಜ್ಯ ಸರ್ಕಾರದ ಇಲಾಖೆಗಳ ಅಥವಾ ಕೇಂದ್ರ ಸರ್ಕಾರದ ಇಲಾಖೆಗಳ ಅಥವಾ ಸ್ವಾಯತ್ತ ನಿಕಾಯಗಳ ಅಥವಾ ಶಾಸನಬದ್ಧ ಸಂಸ್ಥೆಗಳ ಮಾಲೀಕತ್ವದ ಭೂಮಿಯ ಗಡಿಯೊಳಗಿರುವ, ರಸ್ತೆಯ ಮೂಲಕ ಅಥವಾ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಕಾಲುಹಾದಿಯ ಮೂಲಕ ಅಥವಾ ಬಂಡಿಹಾದಿಯ ಮೂಲಕ ಸಾರ್ವಜನಿಕ ಪ್ರವೇಶವಿಲ್ಲದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗವಿಲ್ಲದ ಸರ್ಕಾರಿ ಖರಾಬು ಭೂಮಿ"

**3. 69-ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 69-ಎ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನಗರ ಪ್ರದೇಶಗಳಲ್ಲಿನ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗಳಿಂದ 18 ಕಿಲೋ ಮೀಟರುಗಳವರೆಗಿನ, ಇತರ ನಗರ ಪಾಲಿಕೆಗಳ ವ್ಯಾಪ್ತಿಗಳಿಂದ 5 ಕಿಲೋ ಮೀಟರುಗಳವರೆಗಿನ ಭೂ ಬಂಧಿತ ಸರ್ಕಾರಿ ಖರಾಬು ಭೂಮಿಯನ್ನು 68ನೇ ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಹಕ್ಕನ್ನು ಅಂತ್ಯಗೊಳಿಸುವಿಕೆಯ ತರುವಾಯ ಸರ್ಕಾರವು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಆದರೆ ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಕ್ಕೆ ಕಡಿಮೆಯಲ್ಲದ ಅಂಥ ದರಗಳಲ್ಲಿ ವಿಲೇವಾರಿ ಮಾಡಬಹುದು:

ಅಲ್ಲದೆ ಪರಂತು, ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭಕ್ಕೆ ಮೊದಲು ಸೊಸೈಟಿಗಳಿಗೆ, ಧರ್ಮಾರ್ಥ ಅಥವಾ ಧಾರ್ಮಿಕ ಸಂಸ್ಥೆಗಳಿಗೆ ಅಥವಾ ಶೈಕ್ಷಣಿಕ ಸಂಸ್ಥೆಗಳಿಗೆ ಅಥವಾ ಕೃಷಿ ಅಥವಾ ಇತರ ಉದ್ದೇಶಗಳಿಗೆ ಹದಿನೈದು ವರ್ಷಗಳಿಗಿಂತ ಹೆಚ್ಚಿಗೆ ಗುತ್ತಿಗೆ ನೀಡಿದ ಸರ್ಕಾರಿ ಭೂಮಿಗಳ ಮಂಜೂರಾತಿಯನ್ನು ಸರ್ಕಾರಕ್ಕೆ ಅಗತ್ಯವಿಲ್ಲವೆಂದು ಖಚಿತಪಡಿಸಿಕೊಂಡ ತರುವಾಯ ಏಕಕಾಲ ಕ್ರಮಜರುಗಿಸುವಿಕೆಯಂತೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ದರಗಳಲ್ಲಿ, ಅದೇ ಉದ್ದೇಶಕ್ಕಾಗಿಯಾದಲ್ಲಿ, ಚಾಲ್ತಿಯಲ್ಲಿರುವ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳಿಗೆ ಕಡಿಮೆಯಲ್ಲದ ದರದಲ್ಲಿ, ಇತರ ಉದ್ದೇಶಕ್ಕಾಗಿಯಾದಲ್ಲಿ, ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಕ್ಕೆ ಕಡಿಮೆಯಲ್ಲದ ದುಪ್ಪಟ್ಟು ದರದಲ್ಲಿ ಸರ್ಕಾರವು ವಿಲೇವಾರಿ ಮಾಡತಕ್ಕದ್ದು."

The above translation of the Karnataka Land Revenue (second Amendment) Act, 2020 (Karnataka Act  of 2020)shallbe authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

**ವಜುಭಾಯಿ ವಾಲ**
ಕರ್ನಾಟಕ ರಾಜ್ಯಪಾಲರು
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE